ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ .

962. ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ತೀರ್ಥಹಳ್ಳಿ ತಾಲ್ಲೂಕಿನ ಲೋಕೋಪಯೋಗಿ ರಸ್ತೆಗಳನ್ನು ಅಭಿವೃದ್ಧಿ ಹಾಗೂ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೆ ;

ಆ) ಹಾಗಿದ್ದಲ್ಲಿ, ಇದುವರೆವಿಗೂ ಈ ಕಾಮಗಾರಿಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ, ಮತ್ತು ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಹೌದು.

ಆ) ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿಗಾಗಿ ಪ್ರಸ್ತುತ ಸಾಲಿನಲ್ಲಿ ಒಟ್ಟು 35.11 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದ್ದು ಜನವರಿ ಅಂತ್ಯದವರೆಗೆ 28.19 ಲಕ್ಷ ರೂ. ಗಳನ್ನು ವೆಚ್ಚ ಮಾಡಲಾಗಿದೆ.

ಕಾರವಾರ - ಬಳ್ಳಾರಿ ರಾಜ್ಯ ಹೆದ್ದಾರಿ ರಸ್ತೆಯನ್ನು ಅಭಿವೃದ್ಧಿಗೊಳಿಸಲು ವಿಷ್ವನ್ ಅಭಿವೃದ್ಧಿ ಬ್ಯಾಂಕ್‌ನ ನೆರವು

973. ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬುರ್ಗಿ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಕಾರವಾರ - ಬಳ್ಳಾರಿ ರಾಜ್ಯ ಹೆದ್ದಾರಿ ರಸ್ತೆಯನ್ನು ಅಭಿವೃದ್ಧಿಗೊಳಿಸಲು ವಿಷ್ವನ್ ಅಭಿವೃದ್ಧಿ ಬ್ಯಾಂಕ್ ನೆರವು ಸರ್ಕಾರಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ನೆರವಿನ ಮೊತ್ತ ಹಾಗೂ ಇದುವರೆವಿಗೂ ಸ್ವೀಕರಿಸಿದ ಹಣದ ಮೊತ್ತ ಎಷ್ಟು ;

ಇ) ಮೇಲ್ಕಂಡ ರಸ್ತೆಯ ಅಭಿವೃದ್ಧಿಯನ್ನು ಈಗಾಗಲೇ ಕೈಗೊಂಡಿದ್ದಲ್ಲಿ, ಅಭಿವೃದ್ಧಿಗಾಗಿ ಆಯ್ಕೆಗೊಂಡ ವಿಸ್ತೀರ್ಣ ಹಾಗೂ ರಸ್ತೆಯ ಉದ್ದವನ್ನು ತಿಳಿಸುವುದು ;

ಈ) ಹಾಗಿಲ್ಲದಿದ್ದಲ್ಲಿ ಸರ್ಕಾರ ಪೂರ್ಣ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಬೇಕೆಂದು ಯೋಜಿಸಿದ್ದರೂ ಸಹ ಪೂರ್ಣ ಉದ್ದದ ಅಭಿವೃದ್ಧಿಯನ್ನು ಕೈಗೆತ್ತಿಕೊಂಡಿಲ್ಲದಿರುವುದು ನಿಜವೆ?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಕಾರವಾರ - ಹುಬ್ಬಳ್ಳಿ ರಸ್ತೆಯ ಭಾಗವಾದ ಅಂಕೋಲಾದಿಂದ ಹುಬ್ಬಳ್ಳಿವರೆಗೆ (132.4 ಕಿಮಿ) ಮಾತ್ರ ರಸ್ತೆ ಅಭಿವೃದ್ಧಿಗೊಳಿಸಲು ವಿಷ್ವನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವನ್ನು ಕೊಡಲು ಒಪ್ಪಲಾಗಿದೆ.

ಆ) 1989–90 ಡಾಲರ್ ವಿನಿಮಯ ಬೆಲೆಯಂತೆ 24.00 ಕೋಟಿ ರೂ.ಗಳ ನೆರವು ಅನುಮೋದಿತವಾಗಿದೆ. ಕಾಮಗಾರಿಗಳು ಮುಂದುವರೆದಂತೆ ಹಾಗೂ ಖರ್ಚು ಮಾಡಿದ ಮೇಲೆ ಸದರಿ ಖರ್ಚಿನ ಹಣವನ್ನು ಮರು ಪಾವತಿ ಮಾಡುತ್ತಾರೆ. ಡಿಸೆಂಬರ್ 91 ರವರೆಗೆ 458.19 ಲಕ್ಷ ರೂ.ಗಳ ಖರ್ಚನ್ನು ಹಿಂದಿರುಗಿಸುವಂತೆ ಬೇಡಿಕೆ ಸಲ್ಲಿಸಿದ್ದು ವಿಷ್ವನ್ ಅಭಿವೃದ್ಧಿ ಬ್ಯಾಂಕ್ ರವರು ಲೆಕ್ಕವನ್ನು ಒಪ್ಪಿದ್ದಾರೆ. ಶೀಘ್ರದಲ್ಲಿ 458.19 ಲಕ್ಷ ರೂ.ಗಳ ಮರು ಪಾವತಿ ಆಗುತ್ತದೆ.

ಇ) ಅಂಕೋಲಾದಿಂದ ಹುಬ್ಬಳ್ಳಿಯವರೆವಿಗೆ ಅಂದರೆ 132.4 ಕಿಮೀ. ಗಳ ರಸ್ತೆಯ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.